

# ದಿಯಾ ಚೆಲುವೆಯ ಸಿನಿಮಾ ಸಂಭ್ರಮ

‘ದಿಯಾ’ ಸಿನಿಮಾ ತಂದುಕೊಟ್ಟ ಜನಪ್ರಿಯತೆಯ ಹಾದಿಯಲ್ಲಿ ಮುನ್ನಡೆಯುತ್ತಿರುವ ನಟಿ ಖುಷಿ ರವಿ ಅವರಿಗೆ ಸಿನಿಮಾರಂಗ ಈ ವರ್ಷ ಭರವಸೆಯನ್ನು ಹೊತ್ತು ತಂದಂತಿದೆ. ಭಿನ್ನ ಪಾತ್ರಗಳ ಅವರ ಅಪೇಕ್ಷೆಯನ್ನು ಈಡೇರಿಸುವ ಅದೃಷ್ಟವನ್ನೂ ಕೊಟ್ಟಂತಿದೆ.

ಕನ್ನಡದ ಹಲವು ಸಿನಿಮಾಗಳಲ್ಲಿ ಖುಷಿ ನಟಿಸುತ್ತಿದ್ದು, ಆ ಸಿನಿಮಾಗಳು ತಮಗೆ ಗೆಲುವು ತಂದುಕೊಡುವ ನಿರೀಕ್ಷೆಯನ್ನು ಹೊಂದಿದ್ದಾರೆ.

ಇದೇ ಜನವರಿ ತಿಂಗಳಲ್ಲಿ ನಟ ವಿಜಯರಾಘವೇಂದ್ರ ನಟನೆಯ ‘ಕೇಸ್ ಆಫ್ ಕೊಂಡಾಣ’ ಸಿನಿಮಾದಲ್ಲಿ ಖುಷಿ ಅಭಿನಯಿಸಿದ್ದರು. ತನಿಖಾ ಕಥಾಹಂದರದ ಈ ಸಿನಿಮಾ ಪ್ರೇಕ್ಷಕರ ಮನ ಗೆದ್ದಿತ್ತು ಕೂಡ. ಇದೀಗ ‘ಫುಲ್ ಮೀಲ್ಸ್’, ‘ಮಾರ್ಗ’, ‘ಸನ್ ಆಫ್ ಮುತ್ತಣ್ಣ’ ಸಿನಿಮಾಗಳಲ್ಲಿ ಖುಷಿ ನಟಿಸುತ್ತಿದ್ದಾರೆ. ‘ಸನ್ ಆಫ್ ಮುತ್ತಣ್ಣ’ ಸಿನಿಮಾದಲ್ಲಿ ಪ್ರಣಮ್ ದೇವರಾಜ್‌ಗೆ ಖುಷಿ ಜೊತೆಯಾಗಿದ್ದಾರೆ. ಫುಲ್ ಮೀಲ್ಸ್ ಸಿನಿಮಾದಲ್ಲಿ ಲಿಖಿತ್ ಶೆಟ್ಟಿ, ತೇಜಸ್ವಿನಿ ಶರ್ಮಾ ಜೊತೆ ಅಭಿನಯಿಸುತ್ತಿದ್ದಾರೆ.

‘ದಿಯಾ’ ನಂತರ ತೆಲುಗು ಸಿನಿಮಾರಂಗದತ್ತಲೂ ಮುಖಮಾಡಿದ್ದ ಅವರು, ‘ರುದ್ರ’, ‘ಪಿಂಡಂ’ ಸಿನಿಮಾಗಳಲ್ಲಿ ತಮ್ಮ ಅಭಿನಯ ಕೌಶಲ ತೋರಿದ್ದರು. ಕನ್ನಡದ ಜೊತೆಜೊತೆಗೆ ತೆಲುಗಿನ ಮತ್ತೊಂದು ಸಿನಿಮಾದಲ್ಲಿಯೂ ಖುಷಿ ತೊಡಗಿಕೊಳ್ಳಲಿರುವ ಸುದ್ದಿಯಿದೆ. ■



# ಯುವ: ‘ಅಪ್ಪು’ ಹೃದಯಬಡಿತ

ಮೇರು ನಟ ರಾಜಕುಮಾರ್ ಕುಟುಂಬದ ಕುಡಿ ಯುವ ರಾಜ್‌ಕುಮಾರ್ ಅಭಿನಯದ ಚೊಚ್ಚಲ ಸಿನಿಮಾ ‘ಯುವ’ ಇದೇ ಮಾರ್ಚ್ 29ಕ್ಕೆ ಬಿಡುಗಡೆಗೆ ಸಜ್ಜಾಗಿದೆ. ಈಚೆಗೆ ಈ ಸಿನಿಮಾದ ಕೆಲವು ಹಾಡುಗಳನ್ನು ರಿಲೀಸ್ ಮಾಡಲಾಗಿದೆ.

ಸಿನಿಮಾ ಬಿಡುಗಡೆಯ ಖುಷಿಯೊಂದಿಗೆ ತಮ್ಮ ಚಿಕ್ಕಪ್ಪನ ಜೊತೆಗಿನ ನೆನಪುಗಳನ್ನೂ ಯುವ ಹಂಚಿಕೊಂಡಿದ್ದಾರೆ. ಚಾಮರಾಜನಗರದಲ್ಲಿ ಸಿನಿಮಾ ಹಾಡೊಂದನ್ನು ಬಿಡುಗಡೆ ಮಾಡಿದ ಸಂದರ್ಭ, ಯುವ ರಾಜ್‌ಕುಮಾರ್ ಪುನೀತ್ ಅವರನ್ನು ನೆನಪಿಸಿಕೊಂಡು ಮಾತನಾಡಿದ್ದಾರೆ.

‘ನಮ್ಮ ಕುಟುಂಬ ಕಲಾಕ್ಷೇತ್ರಕ್ಕೆ ಬಂದ ಮಣ್ಣು ಚಾಮರಾಜನಗರದ್ದು. ನನ್ನ ಮೊದಲನೇ ಹೆಜ್ಜೆಯೂ ಇದೇ ಮಣ್ಣಿನಿಂದ ಆರಂಭವಾಗುತ್ತಿರುವುದು ತುಂಬಾ ಖುಷಿಯಾಗುತ್ತಿದೆ. ಅಭಿಮಾನಿಗಳ ಪ್ರೀತಿ, ಆಶೀರ್ವಾದಕ್ಕಾಗಿ ಚಿತ್ರರಂಗದಲ್ಲಿ ನಾನು ಕಷ್ಟಪಡುತ್ತಲೇ ಮುಂದುವರಿಯುತ್ತೇನೆ. ಜನರ ಪ್ರೀತಿಗೆ ನಾನು ಋಣಿ’ ಎಂದು ಅಭಿಮಾನಿಗಳನ್ನುದ್ದೇಶಿಸಿ ಮಾತನಾಡಿದ್ದಾರೆ.

“ಪ್ರತಿ ಕಾರ್ಯಕ್ರಮದಲ್ಲೂ ‘ಅಪ್ಪು...ಅಪ್ಪು...’ ಎನ್ನುವ ಅಭಿಮಾನಿಗಳ ಕೂಗು ನನಗೆ ಒಂದು ರೀತಿ ಹೃದಯ ಬಡಿತದಂತೆ ಕೇಳಿಸುತ್ತದೆ. ಅಪ್ಪು ಎಂಬ ಪದವೇ ಹೃದಯಬಡಿತವಾಗಿದೆ” ಎನ್ನುತ್ತಾ, ‘ಕನ್ನಡ ಸಿನಿಮಾ ನೋಡಿ, ಕನ್ನಡದ ಪ್ರತಿಯೊಬ್ಬರನ್ನೂ ಹರಸಿ’ ಎಂದ ಯುವ ರಾಜ್‌ಕುಮಾರ್, ಅಪ್ಪು ಅಭಿನಯದ ಸಿನಿಮಾ ಹಾಡೊಂದಕ್ಕೆ ಹೆಜ್ಜೆ ಹಾಕಿದ್ದಾರೆ.

‘ಯುವ ರಾಜ್‌ಕುಮಾರ್ ಅವರ ಚೊಚ್ಚಲ ಸಿನಿಮಾ ಇದಾಗಿದ್ದು, ಎಲ್ಲರೂ ಹೆಮ್ಮೆಪಡುವ ಸಿನಿಮಾ ಇದಾಗಲಿದೆ. ರಾಜ್ ಕುಟುಂಬದ ಅಭಿಮಾನಿಗಳಿಗೆ ಇದು ಬಹಳ ಹತ್ತಿರವಾದ ಸಿನಿಮಾ ಆಗಲಿದೆ’ ಎನ್ನುವ ಭರವಸೆಯನ್ನು ನಿರ್ದೇಶಕ ಸಂತೋಷ್ ಆನಂದರಾಮ್ ನೀಡಿದ್ದಾರೆ.

ಹೊಂಬಾಳೆ ಫಿಲ್ಮ್ಸ್ ಹಾಗೂ ಸಂತೋಷ್ ಆನಂದ್‌ರಾಮ್ ಕಾಂಬಿನೇಷನ್‌ನಲ್ಲಿ ಮೂಡಿಬಂದಿದ್ದ ‘ರಾಜಕುಮಾರ’ ಹಾಗೂ ‘ಯುವರತ್ನ’ ಬಾಕ್ಸ್ ಆಫೀಸ್‌ನಲ್ಲಿ ಗೆದ್ದಿದ್ದವು. ಇದೇ ಕಾಂಬಿನೇಷನ್‌ನಲ್ಲಿ ‘ಯುವ’ ಮೂಡಿಬಂದಿದ್ದು, ಈ ಸಿನಿಮಾ ಕೂಡ ಗೆಲುವು ಕಾಣುವ ನಿರೀಕ್ಷೆ ಚಿತ್ರತಂಡಕ್ಕಿದೆ. ■

